ಆ) ಘೋಷಿತಗೊಂಡ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ 1030 ಕುಟುಂಬಗಳಿಗೆ ಪರಿಚಯ ಪತ್ರ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ–ಅ

ಬೆಂಗಳೂರು ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳ ವಿವರ

ಕ್ರಸಂ.	ಕೊಳಚೆ ಪ್ರದೇಶದ ಹೆಸರು	ಮಾಲೀಕತ್ವ	ವಿಸ್ತೀರ್ಣ ಎ–ಗು	ಗುಡಿಸಲು ಸಂಖ್ಯೆ	ಜನಸಂಖ್ಯೆ
1	ಗಜಾನಾನಾ ಟಾಕೀಸ್, 1ನೇ ಹಂತ	ಖಾಸಗಿ	1–25	118	637
2	ಅಗ್ರಹಾರ ದಾಸರಹಳ್ಳಿ	ಸರ್ಕಾರಿ	2–20	387	2470
3	ಇಂದಿರಾನಗರ	ಖಾಸಗಿ/ಬಿಡಿಎ	1–06	128	887
4	ಗೊರಗುಂಟೆಪಾಳ್ಯ, ನಂದಿನಿ ಲೇಔಟ್	ಬಿಡಿಎ	2–29	135	891
5	ಬೋವಿ ಪಾಳ್ಯ	ಬಿಡಿಎ	1–20	163	1075
6	ಗಜಾನಾನಾ ಟಾಕೀಸ್, 2ನೇ ಹಂತ	ಸರ್ಕಾರಿ	0–05	50	312
7	ಭೀಮ್‌ಶಕ್ತಿನಗರ	ಬಿಡಿಎ	0–37	49	260
	ಒಟ್ಟು			**1030**	**6532**

508 (786) ಶ್ರೀ ನರೇಂದ್ರಬಾಬು ನೆ.ಲ. (ರಾಜಾಜಿನಗರ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರದ ವ್ಯಾಪ್ತಿಯಲ್ಲಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ವಾಸಿಸುತ್ತಿರುವ ಜನರಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಆಶ್ರಯ ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಪ್ರದೇಶವಾರು ಮತ್ತು ವ್ಯಕ್ತಿವಾರು ವಿವರ ಒದಗಿಸುವುದು;

ಆ) ನಗರದಲ್ಲಿರುವ ಕಡು ಬಡವರಿಗೆ ಆಶ್ರಯ ಯೋಜನೆ ಅಡಿಯಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಯಾವುದು;

ಇ) ವಾಂಬೆ, ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಯೋಜನೆಯಂತೆ ಆಶ್ರಯ ಮನೆಗಳ ನಿರ್ಮಾಣ ಮಾಡಿ ಕಳೆದ 3 ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ (ವಿವರ ನೀಡುವುದು);

ಈ) ಈ ಯೋಜನೆಗಳ ಅಡಿಯಲ್ಲಿ ಹಂಚಿಕೆ ಮಾಡಲು ನಗರಕ್ಕೆ ಸಿದ್ಧಪಡಿಸಿಕೊಂಡಿರುವ ಫಲಾನುಭವಿಗಳು ಯಾರು ಯಾರು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರ ಪರವಾಗಿ):

ಅ) ಇಲ್ಲ.

ಆ) ನಗರ ಪ್ರದೇಶಗಳಲ್ಲಿನ ಕಡು ಬಡವರಿಗೆ ನಗರ ಆಶ್ರಯ ಯೋಜನೆಯಡಿಯಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ಅವಕಾಶ ಇರುತ್ತದೆ.

ಇ) ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಯೋಜನೆಗಳು ಗ್ರಾಮೀಣ ಪ್ರದೇಶದ ಕಡು ಬಡವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವ ಯೋಜನೆಗಳಾಗಿದ್ದು ರಾಜಾಜಿನಗರವು ನಗರ ಪ್ರದೇಶದ ವ್ಯಾಪ್ತಿಗೆ ಒಳಪಡುವುದರಿಂದ ಈ ಯೋಜನೆಗಳಡಿ ಯಾವುದೇ ಮನೆಗಳನ್ನು ನೀಡಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

509 (777) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಮನೆ ನಿವೇಶನಗಳನ್ನು ಫಲಾನುಭವಿಗಳಿಗೆ ವಿವಿಧ ವಸತಿ ಯೋಜನೆಗಳಡಿಯಲ್ಲಿ ಹಂಚಲಾಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಆ) ಸದರಿ ಯೋಜನೆಗಳಡಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಂಚಿಕೆ ಮಾಡಲಾದ ನಿವೇಶನಗಳೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿನ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆಯೇ;

ಈ) ಈ ಹಂಚಿಕೆಯಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು?

ಶ್ರೀ ಡಿ.ಟಿ. ಜಯಕುಮಾರ್(ವಸತಿ ಸಚಿವರ ಪರವಾಗಿ):

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಗ್ರಾಮೀಣ ವಸತಿ ನಿವೇಶನ ಯೋಜನೆಯಡಿ 11,576 ಮತ್ತು ನಗರ ವಸತಿ ನಿವೇಶನ ಯೋಜನೆಯಡಿ 5,539 ಹೀಗೆ ಒಟ್ಟು 17,115 ವಸತಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಹಂಚಿಕೆ ಮಾಡಲಾದ ವಸತಿ ನಿವೇಶನಗಳ ಜಿಲ್ಲಾವಾರು ವಿವರವನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ.

ಆ) ಕಳೆದ ಎರಡು ವರ್ಷಗಳಲ್ಲಿ ಸದರಿ ಯೋಜನೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 786 ಮತ್ತು ಉಡುಪಿ ಜಿಲ್ಲೆಯಲ್ಲಿ 344 ನಿವೇಶನಗಳನ್ನು ಹಂಚಿಕೆ ಮಾಡಿದ್ದು, ತಾಲ್ಲೂಕುವಾರು ನಿವೇಶನಗಳ ವಿವರವನ್ನು ಅನುಬಂಧ–ಆ ನಲ್ಲಿ ನೀಡಲಾಗಿದೆ.

ಇ) ಹೌದು.

ಈ) ಇಂದಿರಾ ಆವಾಸ್ ಯೋಜನೆಯಡಿ ಕೇಂದ್ರ ಸರ್ಕಾರವು 1.4.2004 ರಂದು ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಮಾರ್ಗಸೂಚಿಗಳ ಪ್ರಕಾರ ಪರಿಶಿಷ್ಟ ಜಾತಿ